ಫ್ಲೋರ್ ನಾಟ್ ಸೆವೆನ್ನಿನ ಶಂಭೋಶಂಕರರಾದರು.

* * *

ಸುಲೂತಾಯೀ ಚಹಾ ಮಾಡಿಕೊಳ್ಳಲು ಪಂಪ್ ಸ್ಟೋವೊಂದಿಗೆ ಗುದ್ದಾಡುತ್ತಿದ್ದಳು. ಯಾರೋ ಬಾಗಿಲು ತಟ್ಟಿದ ಶಬ್ದ. ಸಾರಿಕಾ! 'ಆಟೋದಾಗ ಅಡಗೀಮನಿಗಂತ ಹೊಸಾ ಸಾಮಾನ ತಂದೇನಿ. ಅವನ್ನಷ್ಟ ಇಳಸ್ಕೋಬೇಕು, ಜ಼ರಾ ಹಿಡೀಬಾಲಾ ತಾಯೀ' ಏನಿದ್ದರೂ ಸಂಸಾರದ ಎಲುಬನ್ನು ತಾನೇ ನೆಟ್ಟಗಾಗಿಸಿಕೊಂಡು ಗಟ್ಟಿಗೊಳಿಸಿಕೊಳ್ಳಬೇಕು ಎಂಬ ನಿಲುವು ಆಕೆಯ ಮುಖದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಸುಲೂತಾಯೀ ಒಂದೊಂದೇ ಮೆಟ್ಟಿಲುಗಳನ್ನು ಇಳಿಯುತ್ತ ಹೋದಂತೆ ಸುಡುವ ಹಂಚಿನ ಮೇಲೆ ಕಾಲಿಟ್ಟಂತಾಗುತ್ತಿತ್ತು. 'ಇನ್ನೆರಡ ದಿನಕ್ಕ ನಾ ಪೋಟೋಸೂಟ್‌ಗೆ ಮುಂಬೈಕ ಹೊಂಡತೀನಿ. ಕಂಪನಿಯವ್ರ ಕಳಿಸಿಕೊಡಾತಾರು. ಅಷ್ಟರೊಳಗ ಮನಿ ಜೋಡಿಸಿದರಾತು ಅಂತ ಬನ್ನೇನವಾ. ಅಂದಂಗ ಮಾಬೂ? ಕೀಲಿಕಾಯಿ ನಿನ್ನ ಹಂತೇಕ ಇರಬೇಕಲಾ?' ಉತ್ತರ ಬಾರದೇ ಇದ್ದಾಗ ತಿರುಗಿ ನೋಡಿದಳು. ಸುಲೂತಾಯಿಯ ಗಂಟಲಿನ ನರಗಳು ಉಬ್ಬಿದ್ದವು.



ಸಾರಿಕಾ ಆಟೋದೊಳಗಿನ ಸಾಮಾನುಗಳನ್ನು ಇಳಿಸಬೇಕು ಎಂದುಕೊಳ್ಳುತ್ತಿರುವಾಗ ಆಕೆಯ ದುಪಟ್ಟಾದ ಸೇಫ್ಟಿಪಿನ್ ಭುಜವನ್ನು ಕಚ್ಚಿತು. ಸಣ್ಣಗೆ ನರಳುತ್ತ ಅದರ ಬಾಯಿ ಮುಚ್ಚಲು ನೋಡಿದಳು. ಸುಲೂತಾಯಿ ಆ ಸೇಫ್ಟಿಪಿನ್ ಹಿರಿದು ಅದರ ಬೆನ್ನನ್ನು ನೆಟ್ಟಗಾಗಿಸಿದವಳೇ ಬೀಸಿ ಎಸೆದುಬಿಟ್ಟಳು. ಅವಳನ್ನು ಒತ್ತಾಯದಿಂದ ಅದೇ ಆಟೋದಲ್ಲಿ ಕೂರಿಸಿ ನೆತ್ತಿ ನೇವರಿಸುತ್ತ ಎಲ್ಲವೂ ಒಳ್ಳೆಯದಾಗಲಿ ಎಂಬಂತೆ ನೋಡಿದಳು. ಇಬ್ಬರಿಂದಲೂ ಮಾತು ಹೊಮ್ಮಲಿಲ್ಲ. ಮುಂಬೈ ಬಸ್ ಹತ್ತಿಸೆಂದು ಆಟೋದವನ ಕೈಯಲ್ಲಿ ಇಪ್ಪತ್ತರ ನೋಟನ್ನು ತುರುಕಿ ಕೈಬೀಸಿದಳು.

* * *

ಡೈರೆಕ್ಟರ್ ಸೀಟಿ ಊದುತ್ತಿದ್ದಂತೆ ಎಲ್ಲರೂ ಬೇಗ ಊಟ ಮುಗಿಸಿದರು. ಶುಭಾಂಗಿ ಮುಂದಿನ ದೃಶ್ಯಕ್ಕಾಗಿ ಟಚಪ್ ಮಾಡಿಕೊಳ್ಳಲು ಮುಖಕ್ಕೆ ಕನ್ನಡಿ ಹಿಡಿದುಕೊಂಡಳು. ಉಳಿದವರು ಅವರವರ ಕೆಲಸಕ್ಕೆ ಮರಳಿದರು. ನಾನು ಸಂಜೆಯ ತಿಂಡಿಗೆ ಪಾವ್ ಭಾಜೀ ಮಾಡಲು ಆಲೂಗಡ್ಡೆಯ ಸಿಪ್ಪೆ ಸುಲಿಯಲು ನೋಡಿದೆ. ಉಗುರುಗಳು ಸಿಪ್ಪೆಗೆ ತಾಗುತ್ತಲೇ ಇಲ್ಲ. ಒಂದೊಂದು ಆಲೂಗಡ್ಡೆಯೂ ಕಬ್ಬಿಣದ ಗುಂಡುಗಳಂತೆ ಭಾಸವಾಗುತ್ತಿವೆ. ಕಿಟಕಿಯಾಚೆ ಎಲ್ಲರೂ ಶೂಟಿಂಗ್‌ನಲ್ಲಿ ಮುಳುಗಿದ್ದಾರೆ. ಇದ್ದಕ್ಕಿದ್ದಂತೆ ನನ್ನ ಬಲಗಾಲಿಗೆ ವಿಚಿತ್ರ ಬಲ ಬಂದಂತಾಗಿ, ತನ್ನಷ್ಟಕ್ಕೆ ತಾನೇ ಮೇಲೇಳುತ್ತಿದೆ. ಯಾವ ಸಮಯದಲ್ಲಿಯೂ ಅದು ಪಕ್ಕದಲ್ಲಿರುವ ಆಲೂಗಡ್ಡೆಯ ಮೂಟೆಯನ್ನು ತಾಕಬಹುದು. ಅರೆ! ಅದರ ಬೆನ್ನನ್ನು ಜಾಡಿಸಿ ಒದ್ದೇಬಿಟ್ಟಿತು! ಶರಟು ಬಿಚ್ಚಿ ಮೈಹರವಿಕೊಂಡು ಗೊರಕೆ ಹೊಡೆಯುತ್ತಿದ್ದ ಮೂಟೆಯು ಉರುಳುರುಳುತ್ತ ಅಂಗಳಕ್ಕೆ ಬಿದ್ದಿತು.

ಕಟ್ ಕಟ್ ಕಟ್...! ಎಲ್ಲರೂ ಗಾಬರಿಯಿಂದ ಓಡಿಬಂದರು.

ಆರಾಮ ಕುರ್ಚಿಯಲ್ಲಿ ಕುಳಿತಿದ್ದ ಶುಭಾಂಗಿ ಹುಬ್ಬುಗಳನ್ನೇರಿಸಿ ಕಣ್ಣಸನ್ನೆಯಲ್ಲಿಯೇ ಪ್ರಶ್ನಿಸಿದಳು. ನನ್ನ ಕಣ್ಣುಗಳು ಅವಳಿಗೆ ಬೇಕಾದ ಉತ್ತರವನ್ನೇ ರವಾನಿಸಿದವು. ಕಾಲಮೇಲೆ ಕಾಲನ್ನು ಹಾಕಿಕೊಂಡು ಕುರ್ಚಿಗೆ ತಲೆಯಾನಿಸಿ ಆಕಾಶಮುಖಿಯಾದಳು. ಅವಳ ತುಟಿಯಂಚಿನಿಂದ ಅಷ್ಟಷ್ಟೇ ನಗು ಹೊಮ್ಮುತ್ತಿತ್ತು.

ಇತ್ತ ಸೆಟ್ಟಿನ ಮಂದಿ ಮೂಟೆಯ ಮೂಗಿಗೆ ಕೈಹಿಡಿದು ನೋಡುತ್ತಿದ್ದರು. ಅದಿನ್ನೂ ಗೊರಕೆ ಹೊಡೆಯುತ್ತಿತ್ತು. ಚೊಂಬು ನೀರು ಮುಖಕ್ಕೆ ಎರಚಿದಾಗ ಮಿಸುಕಾಡಿತಾದರೂ ಗಟ್ಟಿಯಾಗಿ ಮುಚ್ಚಿಕೊಂಡ ತನ್ನ ಕಣ್ಣುಗಳನ್ನು ಮಾತ್ರ ತೆರೆಯಲೇ ಇಲ್ಲ. ●